ಅವರಿಂದಲೇ ರಾಜಕೀಯ ರಂಗದಲ್ಲಿ ದುಡಿಯುತ್ತಿದ್ದಾರೆ. ತಾವು ಉಳಿಯುವ ಸಲುವಾಗಿ ಇಲ್ಲಾ ತಾವು ಅಂಬೇಡ್ಕರ್ ಅನುಯಾಯಿಗಳೆಂದು ತೋರಿಸಿಕೊಳ್ಳಲು ಬರೀ ಜನತೆಯನ್ನು ಪ್ರಚೋದಿಸುವ ಕಾಯಕ ಮಾಡಿ, ಜನತೆ ಸಿಡಿದೆದ್ದಾಗ ಮಾರ್ಗದರ್ಶನ ಮಾಡದೆ ತಾವು ಕಾಂಗ್ರೆಸ್ ಮನೆಯಲ್ಲಿ ಕುಂತರು' ಎಂದು ಗಂಗಾರಾಮ ಚಂಡಾಳ ಟೀಕಿಸಿದರು.

ಬಿಬಿಯವರಿಗೆ ಸಿಕ್ಕ ಮೆಚ್ಚುಗೆ, ವಿಮರ್ಶೆ ಮತ್ತು ಕಹಿಟೀಕೆಗಳು, ಬೂಸಾ ಪ್ರಕರಣವು ಶಕ್ತಿ ರಾಜಕಾರಣ ಹಾಗೂ ದಲಿತ ಚಳವಳಿಗಳಲ್ಲಿ ಬೇರೆಬೇರೆ ಆಯಾಮಗಳಲ್ಲಿ ಅರ್ಥ ಪಡೆದುಕೊಂಡಿದ್ದರ ದ್ಯೋತಕವಾಗಿವೆ. ಬಿಬಿಯವರು ಅಧಿಕಾರದ ಮೂಲಕವೇ ಸಮಾಜದ ಬದಲಾವಣೆ ಸಾಧ್ಯವೆಂದೂ ಜನ ಚಳವಳಿಯು ಅದಕ್ಕೆ ಪೂರಕವಾಗಿ ಇರಬೇಕೆಂದೂ ನಂಬಿದವರು. ಬರಹಗಾರರ ಒಕ್ಕೂಟದ ಸಮಾವೇಶದಲ್ಲಿ 'ಸಾಹಿತ್ಯ ಬರೆದರೆ ಬದಲಾವಣೆ ಮಾಡಲು ಸಾಧ್ಯವಿಲ್ಲ ಸ್ವಾಮಿ. ನಿಮ್ಮಂತಹ ಛಲವಂತರು ಅಧಿಕಾರಕ್ಕೆ ಬರಬೇಕು. ಅಧಿಕಾರಕ್ಕೆ ಬಂದರೆ ಮಾತ್ರ ಬದಲಾವಣೆ ಆಗುತ್ತದೆ' ಎಂದು ಅವರಾಡಿದ ಮಾತೂ ಇದನ್ನು ದೃಢಪಡಿಸುತ್ತದೆ. ಅವರ ಮಾತಲ್ಲಿ ನಿಜವಿತ್ತು. ಆದರೆ, ಆ ಹೊತ್ತಲ್ಲಿ ಅಧಿಕಾರ ಪಡೆಯುವುದು ಎಂದರೆ ಕಾಂಗ್ರೆಸಿಗೆ ಹೋಗುವುದು ಎಂದಾಗಿತ್ತು. ಕಾಂಗ್ರೆಸ್ ಸರ್ಕಾರದಿಂದ ಅಂಬೇಡ್ಕರ್ ರಾಜೀನಾಮೆಯಿತ್ತು ಹೊರಬಂದ ಮತ್ತು ಕಾಂಗ್ರೆಸ್ ಅಭ್ಯರ್ಥಿಯ ಎದುರು ಸೋತ ಕಹಿನೆನಪು, ಕೆಲವರಲ್ಲಿ ಇದ್ದಿರಬೇಕು. ಮುಖ್ಯವಾಗಿ ಆಗಷ್ಟೇ ಚಿಗುರುತ್ತಿದ್ದ ದಲಿತ ಚಳವಳಿಗಳು ಶಕ್ತಿರಾಜಕಾರಣದಲ್ಲಿ ಧುಮುಕಿ ಅಧಿಕಾರ ಗ್ರಹಣ ಮಾಡುವ ಆಲೋಚನೆಯನ್ನಾಗಲಿ ಕಸುವನ್ನಾಗಲಿ ಹೊಂದಿರಲಿಲ್ಲ. ಅವು ಜನರ ಆಲೋಚನ ಕ್ರಮವನ್ನು ಬದಲಿಸುವುದು ಮುಖ್ಯವೆಂದು ನಂಬಿದ್ದವು. ಎಂತಲೇ ಬಿಬಿ, ಮುಂದೆ ರೂಪುಗೊಂಡ ದಲಿತ ಚಳವಳಿಯಲ್ಲಿ ಸಾವಯವ ಭಾಗವಾಗಲಿಲ್ಲ.

## ಚಳವಳಿಗಳ ತಾಯಿ

ಯಾವುದೇ ಚಾರಿತ್ರಿಕ ವಿದ್ಯಮಾನವು ಸಂಕೀರ್ಣವಾದ ಸುಪ್ತವಾದ ಹಲವು ಒಳಸುಳಿಗಳನ್ನು ಪಡೆದಿರುತ್ತದೆ. ಅವನ್ನು ಮುಖಬೆಲೆಯಲ್ಲಿ ಗ್ರಹಿಸುವುದು ಮತ್ತು ತೀರ್ಮಾನಿಸುವುದು ಸರಳೀಕರಿಸಿದಂತೆ. ಬೂಸಾ ಪ್ರಕರಣವು, ಸಾಹಿತ್ಯದ ನೆಪದಲ್ಲಿ ಸಮಾಜ ಮತ್ತು ರಾಜಕಾರಣದಲ್ಲಿದ್ದ ಹಲವು ಬಿಕ್ಕಟ್ಟುಗಳನ್ನು ಕಾಣಿಸಿತು; ಜತೆಗೆ ಹೊಸ ಚಾರಿತ್ರಿಕ ಶಕ್ತಿಗಳನ್ನೂ ಬಿಡುಗಡೆಗೊಳಿಸಿತು. ಅದರ ದೆಸೆಯಿಂದ ಹುಟ್ಟಿದ ಹೊಸ ಅಲೆಗಳು, ಪುರೋಹಿತಶಾಹಿ, ಜಾತಿಪದ್ಧತಿ, ಅಸ್ಪೃಶ್ಯತೆಗಳನ್ನು ವಿರೋಧಿಸುವ ಸಮಾಜವಾದಿ ಸಮಾನತಾವಾದಿಯಾದ ಅನೇಕ ಸಂಘಟನೆಗಳಿಗೂ ಚಳವಳಿಗಳಿಗೂ ಜನ್ಮಕೊಟ್ಟವು. ಅವುಗಳಲ್ಲಿ ಬರಹಗಾರರು ಮತ್ತು ಕಲಾವಿದರ ಒಕ್ಕೂಟ (1974), ದಲಿತ ಲೇಖಕರ ಕಲಾವಿದರ ಒಕ್ಕೂಟ (1976), ದಲಿತ ಸಂಘರ್ಷ ಸಮಿತಿ (1976), ಬಂಡಾಯ ಸಾಹಿತ್ಯ ಚಳವಳಿ (1979) ಮುಖ್ಯವಾದವು. ಮೊದಲೆರಡೂ ಸಂಘಟನೆಗಳ ಉದ್ಘಾಟನಾ ಕಾರ್ಯಕ್ರಮಗಳಲ್ಲಿ ಬಿಬಿ ಭಾಗವಹಿಸಿದರು. ಚಂಪಾ ಹೇಳುವಂತೆ ಬೂಸಾ ಚಳವಳಿಯು 'ಒಂದು ಸಣ್ಣತೊರೆ. ಆಮೇಲೆ ನೆಲದೊಳಗ ಹಿಂಗಿ ಅಂತರ್ಜಲವಾಗಿ ಮುಂದಿನ ಎಲ್ಲ ಚಳವಳಿಗಳ ಬೇರಿಗೆ ಅದು ನೀರು ಉಣಿಸಿತು'. ಈ ಅರ್ಥದಲ್ಲಿ ಬೂಸಾ ಪ್ರಕರಣವನ್ನು ಚಳವಳಿಗಳ ತಾಯಿ ಎನ್ನಬಹುದು.

ಚಾರಿತ್ರಿಕ ವ್ಯಂಗ್ಯವೆಂದರೆ, ಕನ್ನಡ ಸಾಹಿತ್ಯವನ್ನು ನಿರಾಕರಿಸುವ ದನಿಯಿದೆ ಎಂದು ಹೇಳಲಾದ ಹೇಳಿಕೆಯೊಂದರ ಮೂಲಕ ಬೂಸಾ ಪ್ರಕರಣ ಆರಂಭಗೊಂಡಿತು. ಆದರೆ, ಈ ಪ್ರಕರಣದಲ್ಲಿ ಬಿಬಿಯವರನ್ನು ಬೆಂಬಲಿಸಿದ ಸಂಘಟನೆ, ಪತ್ರಿಕೆ ಮತ್ತು ಚಳವಳಿಗಳ ಹಿಂದೆ ಇದ್ದವರು ಹೆಚ್ಚಾಗಿ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು, ಅಧ್ಯಾಪಕರು, ಲೇಖಕರು. ತಮಿಳುನಾಡಿನಲ್ಲಿ ಸಿನಿಮಾ ತಾರೆಯರು